# ಮೆಸ್ಸಿ: ವಿದಾಯದತ್ತ ಚಿತ್ತ

ಲಯೊನಲ್ ಮೆಸ್ಸಿ! ಜಗತ್ತಿನಾದ್ಯಂತ ಕೋಟ್ಯಂತರ ಫುಟ್‌ಬಾಲ್ ಪ್ರೇಮಿಗಳು ಆರಾಧಿಸುವ ಆಟಗಾರ. ಯೂರೋಪಿನಲ್ಲಿ ಈತನ 'ಭಕ್ತಗಣ'ದ ಸಂಖ್ಯೆಯೂ ಕೋಟಿಯಲ್ಲಿದೆ. ಎಲ್ಲರದ್ದೂ ಈಗ ಒಂದೇ ಅಳಲು– ಮೆಸ್ಸಿ ರಿಟೈರ್ಡ್ ಆದ ಬಳಿಕ ಮುಂದೇನು?




32ರ ಹರೆಯದ ಮೆಸ್ಸಿ ಇವತ್ತಿಗೂ ಬಾರ್ಸಿಲೋನ ಕ್ಲಬ್‌ನ ಕಣ್ಮಣಿ. ಈ ಸೀಸನ್‌ನಲ್ಲೂ ತಂಡ ಆತನ ಗೋಲುಗಳಿಂದಲೇ ಮುನ್ನಡೆಯುತ್ತಿದೆ. ಸತತ ಆರನೆಯ ಬಾರಿ 'ವಿಶ್ವದ ಅತ್ಯುತ್ತಮ ಫುಟ್‌ಬಾಲ್ ಆಟಗಾರ' (ಬಲೂನ್ ಡಿ ಓರ್) ಪ್ರಶಸ್ತಿಯನ್ನು ಎತ್ತಿಕೊಂಡಿರುವ ಮೆಸ್ಸಿಗೂ ನಿವೃತ್ತನಾಗಲು ಮನಸ್ಸಿಲ್ಲ. 'ಇನ್ನೂ ಕೆಲವು ಸಮಯ ಆಟವಾಡುತ್ತೇನೆ ಎಂದುಕೊಂಡಿದ್ದೇನೆ. ನನಗೆಷ್ಟು ವಯಸ್ಸಾಗಿದೆ ಎನ್ನುವುದು ನನಗೆ ಗೊತ್ತು. ವಿದಾಯದ ಘಳಿಗೆ ಹತ್ತಿರವಾಗುತ್ತಿದೆ ಎನ್ನುವುದೂ ಗೊತ್ತು. ಎಲ್ಲವೂ ವೇಗವಾಗಿ ಘಟಿಸುತ್ತದೆ' ಎಂದು ಕಳೆದ ವಾರ ಮೆಸ್ಸಿ ಮಾಡಿರುವ ಟ್ವೀಟ್, ಆತನ ಕೋಟ್ಯಂತರ ಅಭಿಮಾನಿಗಳ ಎದೆಬಡಿತ ಹೆಚ್ಚಿಸಿದೆ. ಅದಕ್ಕೆ ತಕ್ಕಂತೆ ಬಾರ್ಸಿಲೋನ ಕ್ಲಬ್‌ನ ಮ್ಯಾನೇಜರ್ ಕೂಡಾ 'ಮೆಸ್ಸಿಯ ಬಳಿಕ ಮುಂದೇನು ಎನ್ನುವುದನ್ನು ಕ್ಲಬ್ ಯೋಚಿಸಬೇಕಿದೆ' ಎಂದು ಎಚ್ಚರಿಕೆಯ ಗಂಟೆ ಒತ್ತಿದ್ದಾನೆ.

ಫುಟ್‌ಬಾಲ್‌ನಲ್ಲಿ 30 ದಾಟುವುದೆಂದರೆ ಆಟ ಮುಗಿದಂತೆಯೇ. 18–20ರ ಬಿಸಿರಕ್ತದ ಆಜಾನುಬಾಹು ತರುಣರು ಒಬ್ಬರ ಹಿಂದೆ ಒಬ್ಬರಂತೆ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಮುನ್ನುಗ್ಗಿ ಬರುತ್ತಿರುವ ಈ ಹೊತ್ತಲ್ಲಿ, ಮೆಸ್ಸಿ ಇನ್ನೂ ಮೈದಾನದಲ್ಲಿ ಉಳಿದುಕೊಂಡಿರುವುದಕ್ಕೆ ಆತನ ಅನುಭವ ಮತ್ತು ಅಪ್ಪಟ ಪ್ರತಿಭೆಯಷ್ಟೇ ಕಾರಣ. ಎರಡು ಕಾಲುಗಳ ನಡುವೆ ಚೆಂಡನ್ನು ಡ್ರಿಬ್ಲಿಂಗ್ ಮಾಡುತ್ತಾ ಮೈದಾನದಲ್ಲಿ ಮೆಸ್ಸಿ ಹರಿವ ನೀರಿನಂತೆ ಮುನ್ನುಗ್ಗುವುದನ್ನು ನೋಡಿದಾಗ, 'ಈತನದ್ದೇನು ಕಾಲುಗಳೋ..ಮಂತ್ರದಂಡವೋ!' ಎಂದು ಅಚ್ಚರಿಪಟ್ಟವರಿಗೆ ಲೆಕ್ಕವಿಲ್ಲ. ಈ ಸಲದ ವಿಶ್ವಕಪ್ ಆರಂಭವಾಗುವುದಕ್ಕೆ ಮುನ್ನವೇ 750 ದಶಲಕ್ಷ ಪೌಂಡ್‌ಗಳಿಗೆ ಈತನ ಎರಡೂ ಕಾಲುಗಳಿಗೆ ಇನ್ಶೂರೆನ್ಸ್ ಆಗಿದ್ದು ಹೊಸ ವಿಶ್ವದಾಖಲೆ! ಈತನನ್ನು ಕಳೆದುಕೊಳ್ಳುವುದು ಬಾರ್ಸಿಲೋನ ಕ್ಲಬ್‌ಗೆ ಮಾತ್ರವಲ್ಲ ಅರ್ಜೆಂಟೈನಾ ತಂಡಕ್ಕೂ ಸಂಕಟದ ಸಂಗತಿಯೇ. ಈತನ ಆಟವನ್ನು ಆರಾಧಿಸುತ್ತಿರುವ ಭಕ್ತಗಣಕ್ಕಂತೂ ಈತನ ನಿವೃತ್ತಿಯ ಸುದ್ದಿಯನ್ನು ಅರಗಿಸಿಕೊಳ್ಳಲು ಆಗುತ್ತಿಲ್ಲ.

2022ರ ಕತಾರ್ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಮೆಸ್ಸಿ ಮತ್ತು ರೊನಾಲ್ಡೊ ಆಡುತ್ತಾರೋ ಇಲ್ಲವೋ ಎಂಬ ಬಗ್ಗೆ ಚರ್ಚೆ ಶುರುವಾಗಿ ಒಂದು ವರ್ಷ ಕಳೆದಿದೆ. ರೊನಾಲ್ಡೋ ಮೆಸ್ಸಿಗಿಂತ ಎರಡು ವರ್ಷ ದೊಡ್ಡವನು. 2022ಕ್ಕೆ ಆತನಿಗೆ 37 ಆಗುತ್ತದೆ. ಈಗಲೇ ಆತನ ಆಟದ ವೇಗ ಕುಂಠಿತವಾಗಿದೆ. ಹಾಗಾಗಿ ರೊನಾಲ್ಡೊ ವಿಶ್ವಕಪ್‌ನಲ್ಲಿ ಆಡುವುದು ಬಹುತೇಕ ಅಸಾಧ್ಯ. ಶೀಘ್ರವೇ ಆತ ನಿವೃತ್ತಿ ಘೋಷಿಸಬಹುದು. ಆದರೆ ಮೆಸ್ಸಿ ತನ್ನ ಆಟದ ವೇಗವನ್ನು ಇನ್ನೂ ಉಳಿಸಿಕೊಂಡಿದ್ದಾನೆ. ಆದರೆ 2022ರಲ್ಲಿ ಈತನಿಗೂ 35 ಆಗುತ್ತದೆ. ಕಾಲಿನ ಓಟಕ್ಕಿಂತ ಕಾಲನ ಓಟದ ವೇಗ ಹೆಚ್ಚು ಎನ್ನುವುದನ್ನು ನಾವು ಮರೆಯಲಾಗುವುದಿಲ್ಲ. ಹಾಗಾಗಿ ಮೆಸ್ಸಿ ಕೂಡಾ ಅಷ್ಟರಲ್ಲಿ ನಿವೃತ್ತಿ ಘೋಷಿಸಬಹುದು. ಒಂದು ವೇಳೆ ಮೆಸ್ಸಿ ಆ ವೇಳೆಗೆ ನಿವೃತ್ತಿ ಘೋಷಿಸದಿದ್ದರೂ, ಅರ್ಜೆಂಟೈನಾ ರಾಷ್ಟ್ರೀಯ ತಂಡದಲ್ಲಿ ಆತನ ಸ್ಥಾನಕ್ಕೆ ಸಂಚಕಾರ ತರುವ ಹೊಸ ಆಟಗಾರರು ಬರಬಹುದು. ಈಗಾಗಲೆ ಸ್ಟಾರ್ ಆಟಗಾರ ಪೌಲೋ ಡಿಬಾಲ, ಮೆಸ್ಸಿಯ ಸ್ಥಾನವನ್ನು ಆಕ್ರಮಿಸಬಹುದು ಎನ್ನುವ ಸುದ್ದಿಯೂ ಹಬ್ಬಿದೆ. ರಾತ್ರಿ ಬೆಳಗಾಗುವುದರೊಳಗೆ ಸೂಪರ್ ಸ್ಟಾರ್‌ಗಳು ಹುಟ್ಟುವ ಫುಟ್‌ಬಾಲ್‌ನಲ್ಲಿ ಹೀಗೇ ಎಂದು ಹೇಳುವಂತಿಲ್ಲ. ಅರ್ಜೆಂಟೈನಾ ಹೇಳಿಕೇಳಿ ಫುಟ್‌ಬಾಲ್ ಪ್ರತಿಭೆಗಳ ಬ್ರೀಡಿಂಗ್ ಫ್ಯಾಕ್ಟರಿ. ಒಂದೇ ಒಂದು ಪಂದ್ಯದಲ್ಲಿ ಸಖತ್ತಾಗಿ ಮಿಂಚುವ ತರುಣರೂ ಉಲ್ಕೆಯಂತೆ ಮೇಲೇರಿ ಪ್ರಕಾಶಿಸಬಹುದು. ಅದೂ ಅಲ್ಲದೆ ಈ ವಯಸ್ಸಿನಲ್ಲಿ ಗಾಯಾಳುವಾಗುವ ಸಾಧ್ಯತೆ ಹೆಚ್ಚೇ ಇದೆ. ಗಾಯಾಳುವಾದರೆ ಒಂದಿಡೀ ಸೀಸನ್ ಮೈದಾನದಿಂದ ಹೊರಗೆ ಬೀಳುವ ಸಾಧ್ಯತೆ ಇದೆ. ಹಾಗಾಗಿ ಮೆಸ್ಸಿಯ ವಿಶ್ವಕಪ್ ಕನಸು ಸ್ವಲ್ಪ ದುಬಾರಿಯೇ. ಅಷ್ಟಾಗಿಯೂ, 'ಮೆಸ್ಸಿ ವಿಶ್ವಕಪ್ ಆಡುವ ಛಾನ್ಸ್ ಶೇ 60ರಷ್ಟು' ಎನ್ನುತ್ತಿದೆ ಬೆಟ್ಟಿಂಗ್ ಲಾಬಿ!

ಫೋರ್ಬ್ಸ್ ಪಟ್ಟಿಯ ಪ್ರಕಾರ, ಮೆಸ್ಸಿ ಈ ವರ್ಷದ 'ಅತ್ಯಂತ ಶ್ರೀಮಂತ ಫುಟ್‌ಬಾಲ್ ಆಟಗಾರರ ಪಟ್ಟಿ'ಯಲ್ಲಿ ಎರಡನೇ ಸ್ಥಾನದಲ್ಲಿದ್ದಾನೆ. ಡೇವಿಡ್ ಬೆಕ್ಹಾಮ್ ಮತ್ತು ರೊನಾಲ್ಡೊ 450 ದಶಲಕ್ಷ ಡಾಲರ್ ಮೊತ್ತದೊಂದಿಗೆ ಮೊದಲ ಸ್ಥಾನ ಹಂಚಿಕೊಂಡಿದ್ದರೆ, ಮೆಸ್ಸಿಯದ್ದು 400 ದಶಲಕ್ಷ ಡಾಲರ್ ಗಳಿಕೆ. ಅದರಲ್ಲಿ ಮೂರನೇ ಎರಡರಷ್ಟು ಪಾಲು ಬಾರ್ಸಿಲೋನ ಫುಟ್‌ಬಾಲ್ ಕ್ಲಬ್‌ನ ಕಾಂಟ್ರಾಕ್ಟ್‌ನಿಂದಲೇ ಬಂದಿದೆ. ಕ್ಲಬ್ ಈತನಿಗೆ ವಾರಕ್ಕೆ 6.45 ಲಕ್ಷ ಡಾಲರ್ ಸಂಭಾವನೆ ನೀಡುತ್ತಿದೆ. ವಿಶ್ವಚಾಂಪಿಯನ್ ಬಾಕ್ಸರ್ ಫ್ಲಾಯ್ಡ್ ಮೇವೆದರ್ ಬಿಟ್ಟರೆ ಜಗತ್ತಿನಲ್ಲಿ ಅತ್ಯಧಿಕ ಸಂಭಾವನೆ ಪಡೆಯುವ ಕ್ರೀಡಾಪಟು ಮೆಸ್ಸಿ. ಹಾಗೆಯೇ ಸದ್ಯದ ಫಾರ್ಮ್ ಪ್ರಕಾರ, ವಿಶ್ವದ ಅತ್ಯುತ್ತಮ ಫುಟ್‌ಬಾಲ್ ಆಟಗಾರ ಕೂಡಾ ಮೆಸ್ಸಿಯೇ.

ಲೀಗ್ ಫುಟ್‌ಬಾಲ್‌ನಲ್ಲಿ ಈತ ಗೋಲು ಗಳಿಸುತ್ತಿರುವ ವೇಗ ನೋಡಿದರೆ ಸದ್ಯಕ್ಕಂತೂ ವಿದಾಯ ಘೋಷಿಸಲಿಕ್ಕಿಲ್ಲ. ಈ ಆಟ ಹೀಗೆಯೇ ಮುಂದುವರಿಯಲಿ ಎಂದು ವಿಶ್ವದಾದ್ಯಂತ ಈತನ ಅಭಿಮಾನಿಗಳು ಪ್ರಾರ್ಥಿಸುತ್ತಿದ್ದಾರೆ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.

Editorial Office: 75, M.G Road, Bengaluru-560 001 E-mail:editorsu@sudha.co.in. Phone: 45557333, Editorial:45557262,

Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65